**ದಿನಾಂಕಃ 18-07-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಶ್ರೀ ಎಸ್.ವಿ.ಆರ್. ವಕೀಲರಿಂದಃ**

ನನ್ನ ಗಂಡನ ಹೆಸರು ದೊಡ್ಡಣ್ಣ ಆತನು ಮುದ್ದೀರಪ್ಪನವರ ಮಗ. ಮುದ್ದೀರಪ್ಪರವರಿಗೆ ಹತ್ತುಜನ ಮಕ್ಕಳು. ಆತನಿಗೆ ಇಬ್ಬರು ಹೆಂಡತಿಯರು. ಅವರುಗಳೆಂದರೆ ಒಂದನೇ ಹನುಮಕ್ಕ ಎರಡನೇ ಲಕ್ಕಮ್ಮ. ದಾವಾ ಷೆಡ್ಯೂಲ್ ಆಸ್ತಿಯನ್ನು ಮುದ್ದೀರಪ್ಪನು ಸಂಪಾದಿಸಿದ್ದಾನೆ ಎಂದರೆ ಸರಿ. ಮುದ್ದೀರಪ್ಪನು ಎಷ್ಟು ವರ್ಷಗಳ ಹಿಂದೆ ಮೃತನಾಗಿದ್ದಾನೆ ನನಗೆ ಗೊತ್ತಿಲ್ಲ. ಮುದ್ದೀರಪ್ಪನು ತೀರಿಕೊಂಡಾಗ ನನ್ನ ಯಜಮಾನರು ಹುಟ್ಟಿದ್ದರು. ನನ್ನ ವಿವಾಹವಾಗಿ ಅಂದಾಜು 30-35 ವರ್ಷವಾಗಿದೆ. ಮುದ್ದಪ್ಪನು ತೀರಿಕೊಂಡು 30 ವರ್ಷಗಳ ಮೇಲೆ ಆಗಿದೆ. ಅವರ ಹೆಂಡತಿಯ ಹೆಸರು ತಿಪ್ಪಮ್ಮ. ತಿಪ್ಪಮ್ಮ ತೀರಿಕೊಂಡು ಹತ್ತು ವರ್ಷವಾಗಿದೆ. ಮುದ್ದಮ್ಮ ತೀರಿಕೊಂಡು ಎಷ್ಟು ವರ್ಷವಾಗಿದೆ ನನಗೆ ಗೊತ್ತಿಲ್ಲ. ಪುಟ್ಟೀರಮ್ಮನು ಮುದ್ದೀರಪ್ಪನ ಮಗಳಲ್ಲ ಎಂದರೆ ಸರಿಯಲ್ಲ. ನಾನು ವಂಶವೃಕ್ಷವನ್ನು ತಪ್ಪಾಗಿ ಕೊಟ್ಟೀದ್ದೇನೆ ಎಂದರೆ ಸರಿಯಲ್ಲ. ನಾನು ವಂಶವೃಕ್ಷವನ್ನು ಹಾಜರು ಪಡಿಸಿದ್ದೇನೆ. ನಾನು ವಂಶವೃಕ್ಷವನ್ನು ತಾಲ್ಲೂಕು ಕಚೇರಿಯಿಂದ ಪಡೆದಿರುತ್ತೇನೆ. ಈ ದಾವಾ ಸಲ್ಲಿಸಿರುವ ವಿಚಾರ ಪುಟ್ಟೀರಮ್ಮನಿಗೆ ಗೊತ್ತಿದೆ. ಸುಮಾರು 5-6 ವರ್ಷಗಳಿಂದ ಗೊತ್ತಿದೆ.

ಮುದ್ದೀರಪ್ಪನಿಗೆ ದಾವಾ ಷೆಡ್ಯೂಲ್ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿಗಳು ಇರುವುದಿಲ್ಲ. ಈ ದಾವೆಗೆ ತಕರಾರು ಸಲ್ಲಿಸುವ ದಿನ ಪ್ರತಿವಾದಿಗಳು ಎಲ್ಲರೂ ಬಂದಿದ್ದೇವು. ಅವರು ಎಲ್ಲರೂ ಸಹಿ ಮಾಡಿರುತ್ತಾರೆ. ನನ್ನ ಗಂಡನಿಗೆ ಆರೋಗ್ಯ ಸರಿ ಇಲ್ಲದೇ ಇರುವುದರಿಂದ ಚಿಕಿತ್ಸೆಗಾಗಿ ಆಸ್ಪತ್ರೆಗೆ ತೋರಿಸಿದ್ದೇವೆ. ನನ್ನ ಗಂಡನಿಗೆ ಓಡಾಡಲು ಆಗುವುದಿಲ್ಲ. ಮುದ್ದೀರಪ್ಪ ತೀರಿಕೊಂಡ ಮೇಲೆ ಆತನ ಗಂಡು ಮಕ್ಕಳು ಒಟ್ಟಾಗಿ ಸ್ವಾಧೀನವಿದ್ದಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಆರು ಜನರಿಗೆ ಮಾತ್ರ ಹಕ್ಕು ಇದ್ದು ಮತ್ತು ಅವರು ಬೆಳೆ ಇಡುತ್ತಾರೆ ಎಂದರೆ ಸರಿಯಲ್ಲ. ಆರುಜನರು ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಒಟ್ಟಾಗಿ ಮನೆಗಳನ್ನು ಕಟ್ಟಿಕೊಂಡು ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿಯು ಅವರವರ ಭಾಗದ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡು ಸ್ವಾಧೀನ ಇರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ.

30 ವರ್ಷಗಳ ಹಿಂದೆ ಭಾಗವಾಗಿರುತ್ತಾರೆ. ನಾಗಪ್ಪ ನಾಗೇಂದ್ರಪ್ಪ ಮತ್ತು ನಾಗರಾಜ ಆಗಿರುತ್ತಾರೆ. ಅವರು ಬರವಣಿಗೆ ಮುಖಾಂತರ ಭಾಗವಾಗಿರುತ್ತಾರೆ. ಎಷ್ಟನೇ ಇಸವಿಯಲ್ಲಿ ಭಾಗವಾಗಿರುತ್ತಾರೆ ನನಗೆ ಹೇಳಲು ಆಗುವುದಿಲ್ಲ, ಸಾಕ್ಷಿದಾರರಾಗಿ ಮುದ್ದಪ್ಪ ಚಿಕ್ಕನಾಗಪ್ಪ ಸಹಿ ಹಾಕಿರುತ್ತಾರೆ. ಮುದ್ದಪ್ಪ ಎಂದರೆ ಮುದ್ದೀರಪ್ಪನ ಮಗ. ಸಣ್ಣೀರಪ್ಪನು ಸಹ ಮುದ್ದೀರಪ್ಪನ ಮಗ. ವಿಭಾಗಪತ್ರದಲ್ಲಿ ಏನೇನು ಬರೆದಿದೆ ನನಗೆ ಗೊತ್ತಿಲ್ಲ, ಪತ್ರವನ್ನು ಬರೆಯುವ ಸಮಯದಲ್ಲಿ ನಾನು ಇರಲಿಲ್ಲ, ಸದರಿ ಪತ್ರವನ್ನು ಊರಿನ ಮುಖಂಡರ ಬಳಿ ಬರೆಯಲಾಗಿದೆ. ಊರಿನ ಮುಖಂಡರು ಓಬಳಪ್ಪ, ನಾಗಪ್ಪ, ಸದರಿ ವಿಭಾಗಪತ್ರಕ್ಕೆ ಮುದ್ದಪ್ಪ ಮತ್ತು ಸಣ್ಣನಾಗಪ್ಪ ಸಹಿ ಮಾಡಿರುತ್ತಾರೆ. ವೀರಪ್ಪ ನಾಗಪ್ಪ ಸಣ್ಣೀರಪ್ಪ ಮುದ್ದಣ್ಣ ದೊಡ್ಡಣ್ಣ ಹೆಬ್ಬೆಟ್ಟನ್ನು ಹಾಕಿರುತ್ತಾರೆ. ಸದರಿ ವಿಭಾಗಪತ್ರವನ್ನು ಊರಿನ ಮುಖಂಡರು ಬರೆದಿರುತ್ತಾರೆ. ಸದರಿ ವಿಭಾಗಪತ್ರವನ್ನು ನಮ್ಮ ಊರಿನ ಛೇರಮನ್ ಓಬಳಪ್ಪನ ಮನೆ ಮುಂದೆ ಓಬಳಪ್ಪನವರೇ ಬರೆದಿರುತ್ತಾರೆ. ಈ ವಿಭಾಗಪತ್ರದ ಪ್ರಕಾರ ಮೂರುಜನ ವಿಭಾಗ ಮಾಡಿಕೊಂಡಿರುತ್ತಾರೆ.

ಸದರಿ ವಿಭಾಗಪತ್ರವನ್ನು ಪತ್ರವನ್ನು ತರಿಸಿ ಬರೆದಿರುತ್ತಾರೆ. ಸದರಿ ಮೂರುಜನರು ಯಾವುದೇ ವಿಭಾಗಪತ್ರವನ್ನು ಮಾಡಿಕೊಂಡಿರುವುದಿಲ್ಲ ವಿಭಾಗದ ಪತ್ರವನ್ನು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ, ಸದರಿ ವಿಭಾಗಪತ್ರವನ್ನು ಈ ದಾವೆಗೊಸ್ಕರ ನಾನು ಮತ್ತು ನನ್ನ ಗಂಡ ಮತ್ತು ಓಬಳಪ್ಪ ರವರು ಸೇರಿಕೊಂಡು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ, ಅದೇ ರೀತಿ ವಿಭಾಗಪತ್ರದಲ್ಲಿರುವ ಸಹಿ ಮತ್ತು ಹೆಬ್ಬೆಟ್ಟನ್ನು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ, ಓಬಳಪ್ಪರವರು ಮೃತರಾಗಿರುತ್ತಾರೆ. ವಿಭಾಗಪತ್ರದ ಪ್ರಕಾರ ಖಾತೆ ಪಹಣಿಯನ್ನು ಮಾಡಿ ಕೊಳ್ಳಲಾಗಿದೆ. ಸದರಿ ಖಾತೆ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ದಿನಾಂಕಃ 12-02-1980 ರಂದು ವಾದಿ ನಾಗಪ್ಪನು ಯಾವುದೇ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಮತ್ತು ಸ್ವಾಧೀನವನ್ನು ಸಹ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ, ಸದರಿ ಕ್ರಯದ ಕರಾರುಪತ್ರವನ್ನು ಊರಿನಲ್ಲಿ ಮುಖಂಡರು ಬರೆದಿರುತ್ತಾರೆ. ಊರಿನ ಮುಖಂಡರು ಎಂದರೆ ಓಬಳಪ್ಪನವರು. ಸದರಿ ಕ್ರಯದ ಕರಾರುಪತ್ರಕ್ಕೆ ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ, ಸದರಿ ಕ್ರಯದ ಕರಾರುಪತ್ರವನ್ನು ಸಾವಿರದ ಐದು ನೂರು ರೂಪಾಯಿಗಳಿಗೆ

ಬರೆಯಲಾಗಿದೆ ಅದರಂತೆ ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತೇವೆ. ಮುದ್ದಣ್ಣನು ಬರೆದುಕೊಟ್ಟಿರುವ ಕ್ರಯದ ಕರಾರುಪತ್ರವನ್ನು ಗೋಪಾಲರೆಡ್ಡಿಯವರು ಬರೆದಿರುತ್ತಾರೆ ಅದನ್ನು ಪುತ್ತೂರಿನಲ್ಲಿ ಬರೆಯಲಾಗಿದೆ ಅದನ್ನು ಆರು ಸಾವಿರದ ಐದು ನೂರು ರೂಪಾಯಿಗೆ ಬರೆಯಲಾಗಿದೆ. ಪೂರಾ ಹಣವನ್ನು ಕೊಟ್ಟು ಬರೆಸಲಾಗಿದೆ. ಸದರಿ ಕ್ರಯದ ಕರಾರುಪತ್ರಕ್ಕೆ ದೊಡ್ಡಣ್ಣ ಮತ್ತು ಓಬಳಪ್ಪರವರು ಸಾಕ್ಷಿದಾರರು. ಮುದ್ದಣ್ಣರವರು ತಮ್ಮ ಭಾಗದ ಜಮೀನುನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ-28 ರ ದಾಖಲೆಯನ್ನು ನಾನು ಮತ್ತು ನನ್ನ ಯಜಮಾನರು ಸಾಕ್ಷಿದಾರರು ಮತ್ತು ಗೋಪಾಲರೆಡ್ಡಿ ಸೇರಿಕೊಂಡು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ಕ್ರಯದ ಕರಾರುಪತ್ರದಲ್ಲಿ ಮುದ್ದಣ್ಣ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರುಪತ್ರವನ್ನು ಬರೆಯುವ ದಿನ ನಾನು ಹಾಜರಿದ್ದೆ ಆದರೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ. ಮನೆಗೆ ಸಂಬಂದಿಸಿದ ಇನ್ನೊಂದು ಕ್ರಯದ ಕರಾರುಪತ್ರವನ್ನು ಮುದ್ದಣ್ಣ ಸಣ್ಣೀರಪ್ಪ ಸಣ್ಣನಾಗಪ್ಪ ಮತ್ತು ಈರಪ್ಪ ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯದ ಕರಾರುಪತ್ರದಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ.

ಮನೆಯ ಪೂರ್ವಕ್ಕೆಃ ತಿಮ್ಮಕ್ಕಳ ಮನೆ. ಪಶ್ಚಿಮಕ್ಕೆಃ ಪೂಜಾರಿ ದೊಡ್ಡಪ್ಪ, ಉತ್ತರಕ್ಕೆಃ ಚಿಕ್ಕಣ್ಣನ ಮಗ ನಾಗೇಂದ್ರನ ಮನೆ, ದಕ್ಷಿಣಕ್ಕೆಃ ಚಿಕ್ಕೀರಪ್ಪನ ಮನೆ ಇರುತ್ತದೆ. ಮನೆಯ ನಂ. 80-1 ಆಗಿರುತ್ತದೆ. ಇದನ್ನು ಸಹ ಊರಿನ ಮುಖಂಡರು ಬರೆದಿರುತ್ತಾರೆ. ಸಾಕ್ಷಿದಾರರಾಗಿ ಊರಿನ ಮುಖಂಡರು ಮತ್ತು ಅಣ್ಣ-ತಮ್ಮಂದಿರು ಹಾಕಿರುತ್ತಾರೆ. ಇದನ್ನು ಸಹ ಪೆಮ್ಮನಹಳ್ಳಿ ಗ್ರಾಮದಲ್ಲಿ ಬರೆದಿದೆ. ಇದನ್ನು ಸಹ ನಾನು ನನ್ನ ಗಂಡ ಓಬಳಪ್ಪ ಸೇರಿಕೊಂಡು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಣ್ಣೀರಪ್ಪನಿಗೆ ಶಿವಮ್ಮ ರವರು ಜಮೀನು ಮಾರಾಟ ಮಾಡಿರುವ ಪತ್ರವು ಆಗಿದ್ದು ಇದು ನಮ್ಮ ಬಳಿಯೇ ಇತ್ತು. ಈ ದಾಖಲೆಯ ಪ್ರಕಾರ ಸಣ್ಣೀರಪ್ಪನಿಗೆ ಕ್ರಯಪತ್ರವಾಗಿದೆ. ಮನೆಯ ಕ್ರಯದ ಕರಾರುಪತ್ರದ ಪ್ರಕಾರ ಕ್ರಯಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ವಾದಿಯು ನಮ್ಮ ಮೇಲೆ ಸುಳ್ಳು ದಾವವನ್ನು ಸಲ್ಲಿಸಿರುತ್ತಾರೆ ನಾವು 30 ವರ್ಷಗಳಿಂದಲೂ ಕ್ರಯಪತ್ರ ಮಾಡಿಸಿಕೊಡಿ ಎಂದು ಕೇಳಿರುತ್ತೇವೆ. ಇದರ ಬಗ್ಗೆ 3-4 ಬಾರಿ ಪಂಚಾಯತಿಯಾಗಿರುತ್ತದೆ. ಪಂಚಾಯತಿಯನ್ನು ಊರಿನ ಮುಖಂಡರು ಮಾಡಿದ್ದು 6-7 ಜನ

ಇದ್ದರು. ಜಮೀನು ಮತ್ತು ಮನೆಯನ್ನು ಕ್ರಯದ ಕರಾರುಪತ್ರದ ಪ್ರಕಾರ ಮಾಡಿಕೊಡಿ ಎಂದು ಕೇಳಿರುತ್ತೇವೆ. ಮಾಡಿಕೊಡುತ್ತೇವೆ ಎಂದು ನಮ್ಮ ಮೇಲೆ ಸುಳ್ಳು ದಾವಾವನ್ನು ಹಾಕಿರುತ್ತಾರೆ. ಕ್ರಯದ ಕರಾರುಪತ್ರದ ಪ್ರಕಾರ ನಾವು ದಾವಾನ್ನು ಸಲ್ಲಿಸಿರುವುದಿಲ್ಲ ಏಕೆಂದರೆ ಕ್ರಯಪತ್ರವನ್ನು ಮಾಡಿಕೊಡುತ್ತೇವೆ ಎಂದ ಕಾರಣಕ್ಕಾಗಿ ದಾವವನ್ನು ನಾವು ಸಲ್ಲಿಸಿಲ್ಲ. ನಾನು ವಾದಿಯ ಮೇಲೆ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ಈ ಕ್ರಯದ ಕರಾರುಪತ್ರದ ಪ್ರಕಾರ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಅಣ್ಣ-ತಮ್ಮಂದಿರು ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಛಾಯಚಿತ್ರವಾದ ನಿಡಿ-16 ರಿಂದ ನಿಡಿ-25 ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಮನೆಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇವೆ. ನಾನು ಹಾಜರುಪಡಿಸಿರುವ ನಿಡಿ-10 ರಿಂದ ನಿಡಿ-14 ವಿದ್ಯುತ್ ಶುಲ್ಕ ರಸೀತಿಯು ಮನೆ ಮತ್ತು ಜಮೀನಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ-2 ರಿಂದ ನಿಡಿ-9 ಕಂದಾಯ ರಸೀತಿಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಈ ದಾವಾ ಜಮೀನುವಾದಿ ಮತ್ತು ಪ್ರತಿವಾದಿಗಳ ಜಂಟಿ ಸ್ವಾಧೀನ ನುಭದಲ್ಲಿರುತ್ತದೆ ಎಂದರೆ ಸರಿಯಲ್ಲ. ಎಲ್ಲರೂ ಜಂಟಿಯಾಗಿ ದಾವಾ ಜಮೀನಿನಲ್ಲಿ ಆರನೇ ಒಂದು ಭಾಗದಷ್ಟು ಬೆಳೆಯನ್ನು ತೆಗೆದುಕೊಳ್ಳುತ್ತೇವೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ನನಗೆ ಆರನೇ ಒಂದು ಭಾಗ ಮಾತ್ರ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಯು ಅಮಾಯಕ ವ್ಯಕ್ತಿಯಾಗಿರುವುದರಿಂದ ಆತನ ಜಮೀನಿನ್ನು ಕಬಳಿಸುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿಕೊಂಡು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ದಾವಾ ಬಗ್ಗೆ ಸತ್ಯಾಂಶ ಹೊರಬೀಳುತ್ತದೆ ಎಂದು ನನ್ನ ಗಂಡನನ್ನು ಸಾಕ್ಷಿದಾರರಾಗಿ ಮಾಡದೇ

ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಅಧಿಕ ಸಿವಿಲ್‌ಜಡ್ಜ್ ಮತ್ತು ಜೆಎಂಎಫ್‌ಸಿ
ಪಾವಗಡ